( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ಅಸಲು ದಾವೆ ನಂ.124/2009**

**ದಿನಾಂಕಃ 16-07-2024, ಪಿ ಡಬ್ಲ್ಯೂ–1**

ಪಾಟೀ ಸವಾಲು ಃ ಶ್ರೀ ಆರ್ ಕೆ ಎಂ ವಕೀಲರಿಂದಃ

ಮುದ್ದನಹಳ್ಳಿ ಗ್ರಾಮದಲ್ಲಿರುವ 4 ಎಕರೆ 20 ಗುಂಟೆ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ವಿ ಜಿ ಕೊಪ್ಪಲಿನಲ್ಲಿರುವ ನನ್ನ ತಾತನಿಗೆ ಸೇರಿದ ಮನೆಯ ಖಾತೆ ನಂಬರ್ ನನಗೆ ಗೊತ್ತಿಲ್ಲ. ಮುದ್ದನಹಳ್ಳಿ ಗ್ರಾಮದ 4 ಎಕರೆ 20 ಗುಂಟೆ ಜಮೀನನ್ನು ಲಕ್ಕನಹಳ್ಳಿ ಗ್ರಾಮದ ಚಿಕ್ಕಣ್ಣನ ಮಗ ಪುಟ್ಟಸ್ವಾಮಿಗೌಡರಿಗೆ ಹಾಗೂ ವಿ ಜಿ ಕೊಪ್ಪಲಿನಲ್ಲಿದ್ದ ಮನೆಯನ್ನು ವಿ ಜಿ ಕೊಪ್ಪಲಿನ ಕೊಂಗೇಗೌಡರ ಮಗ ತಿಮ್ಮೇಗೌಡರಿಗೆ ನನ್ನ ತಂದೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರದಲ್ಲಿರುವ ಒಕ್ಕಣೆಗಳನ್ನು ನಾನು ಓದಿ ತಿಳಿದುಕೊಂಡಿಲ್ಲ..

ನನ್ನ ತಂದೆ ಆಸ್ತಿಗಳನ್ನು ಮಾರಾಟ ಮಾಡಿದ ನಂತರ ಸರ್ವೆ ನಂ.6 ರ ಜಮೀನನ್ನು ಖರೀದಿಸಿರುತ್ತಾರೆ. ಸರ್ವೆ ನಂ.6 ರಲ್ಲಿ 2 ಎಕರೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ . ಸದರಿ ಕ್ರಯ ಪತ್ರವನ್ನು ನಾನು ಓದಿ, ಓದಿಸಿ ತಿಳಿದುಕೊಂಡಿಲ್ಲ. ಸದರಿ ಕ್ರಯ ಪತ್ರದಲ್ಲಿ ಮುದ್ದನಹಳ್ಳಿ ಗ್ರಾಮದ4 ಎಕರೆ 20 ಗುಂಟೆ ಜಮೀನು ಹಾಗೂ ವಿ ಜಿ ಕೊಪ್ಪಲಿನ ತೊಟ್ಟಿ ಮನೆಯನ್ನು ಮಾರಾಟ ಮಾಡಿ ಬಂದ ಆದಾಯದಿಂದ ಸರ್ವೆ ನಂ.6 ರ ಜಮೀಪನನ್ನು ಖರೀದಿಸುತ್ತಿದ್ದೇನೆ ಎಂದು ಒಕ್ಕಣೆ ಇದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನನ್ನ ತಂದೆ ವಿದ್ಯಾವಂತರಾಗಿದ್ದು ಸುತ್ತ ಮುತ್ತಲಿನ ಗ್ರಾಮಕ್ಕೆ ಬೇಕಾದಂತಹ ವ್ಯಕ್ತಿಯಾಗಿದ್ದು ಗ್ರಾಮದಲ್ಲಿ ಗೌರವಯುತವಾಗಿ ಇದ್ದಂತಹ ವ್ಯಕ್ತಿ ಎಂದರೆ ಸರಿ. ನನ್ನ ತಂದೆ ಬದುಕಿರುವವರೆಗೂ ತುಂಬಾ ಕಷ್ಟಪಟ್ಟು ಜೀವನ ಮಾಡುತ್ತಿದ್ದರು ಎಂದರೆ ಸಾಕಿಯು ನಾವೆಲ್ಲರೂ ಕಷ್ಟಪಟ್ಟು ಜೀವನ ಮಾಡುತ್ತಿದ್ದೆವು ಹಾಗೂ ಅವರು ಎಲ್ಲವನ್ನೂ ನೋಡಿಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿಯು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ, ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಆದಾಯ ಇರಲಿಲ್ಲ, ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ . ದಾವಾ ಆಸ್ತಿಗಳಲ್ಲಿ ಹಿಸ್ಸೆಯನ್ನು ಪಡೆಯಲು ಪಿತ್ರಾರ್ಜಿತ

ಆಸ್ತಿಗಳನ್ನು ಮಾರಾಟ ಮಾಡಿ ಬಂದ ಆದಾಯದಿಂದ ದಾವಾ ಆಸ್ತಿಗಳನ್ನು ಖರೀದಿ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಗೆ ಯಾವುದೇ ದುರಭ್ಯಾಸ ಇರಲಿಲ್ಲ ಮತ್ತು ಅವರು ಆರೋಗ್ಯವಾಗಿದ್ದರು ಎಂದರೆ ಸರಿ. ನನ್ನ ತಂದೆ ಮೃತರಾಗುವವರೆಗೂ ಅವರು ಆರೋಗ್ಯದಿಂದ ಇದ್ದರು ಎಂದರೆ ಸಾಕ್ಷಿಯು ನನ್ನ ತಂದೆಗೆ ಕೆಮ್ಮು , ದಮ್ಮು ಮತ್ತು ತಿರುಗಾಡಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಸಾಯುವ 7-8 ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ನುಡಿಯುತ್ತಾರೆ.

ದಾವಾ ಐಟಂ ನಂ.8 ನನ್ನ ತಂದೆಯ ಹೆಸರಿನಲ್ಲಿದೆ . ನನ್ನ ತಂದೆ ಬದುಕಿದ್ದಾಗ ಎರಡು ಬ್ಯಾರನ್ ಮನೆಗಳನ್ನು , ಒಂದು ಹೆಂಚಿನ ಮನೆ ಮತ್ತು ಒಂದು ಚದರದ ಆರ್ ಸಿ ಸಿ ಮೆಶಿನ್ ಮನೆಯನ್ನು ಕಟ್ಟಿದ್ದರು, ನನ್ನ ತಂದೆ ತೀರಿಹೋದ ನಂತರ ನಾನು ಒಂದು ಆರ್ ಸಿ ಸಿ ಮನೆ ಹಾಗೂ 2 ನೇ ಪ್ರತಿವಾದಿ ಒಂದು ಆರ್ ಸಿ ಸಿ ಮನೆಯನ್ನು ಕಟ್ಟಿಕೊಂಡೆವು.

ನಾನು ಮತ್ತು 2 ನೇ ಪ್ರತಿವಾದಿ ನಿರ್ಮಾಣ ಮಾಡಿಕೊಂಡಿರುವ ಮನೆಗಳು ಪಂಚಾಯತಿಯಲ್ಲಿ ಖಾತೆಯನ್ನು ಹೊಂದಿಲ್ಲ. 2 ನೇ ಪ್ರತಿವಾದಿ ಸರ್ವೆ ನಂ.5 ರಲ್ಲಿ ಆರ್ ಸಿ ಸಿ ಮನೆ ಕಟ್ಟಿದ್ದಾರೆ. ನಾನು ಕಟ್ಟಿಕೊಂಡಿರುವ ಮನೆಯನ್ನು ಹಾಗೂ 2 ನೇ ಪ್ರತಿವಾದಿ ಕಟ್ಟಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ.

ಐಟಂ ನಂ.7 ಮತ್ತು 8 ರ ಆಸ್ತಿಗಳ ಖಾತಾ ನಂಬರ್ ಪಂಚಾಯತಿ ಖಾತಾ ನಂಬರ್. ಮನೆಗಳಿಗೆ ಸಂಬಂದಿಸಿದಂತೆ ಇ ಸ್ವತ್ತು ಮಾಡಿಸಿಲ್ಲ. ನನ್ನ ತಂದೆ ಬದುಕಿದ್ದಾಗ ಅವರಿಗೆ ಮಾನಸಿಕ ಖಾಯಿಲೆ ಇತ್ತು. ನನ್ನ ತಂದೆಯೇ ಆಸ್ಪತ್ರೆಗೆ ಹೋಗುತ್ತಿದ್ದರು. ಸಾಕ್ಷಿಯು ಮುಂದುವರೆದು ನಾನೇ ಜಾಸ್ತಿ ಕರೆದುಕೊಂಡು ಹೋಗುತ್ತಿದ್ದೆ. ಹಾಸನದ ರಾಜು ನರ್ಸಿಂಗ್ ಹೋಮ್ ಗೆ ನನ್ನ ತಂದೆಯನ್ನು ಕರೆದುಕೊಂಡು ಹೋಗುತ್ತಿದ್ದೆ. ಯಾವ ವೈದ್ಯರಿಗೆ ತೋರಿಸುತ್ತಿದ್ದೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಚೆನ್ನಾಗಿದ್ದರು ಎಂದರೆ ಸರಿಯಲ್ಲ .

ನನ್ನ ತಂದೆ ಆರೋಗ್ಯವಾಗಿದ್ದಾಗ ಅವರ ಸ್ವಯಾರ್ಜಿತ ಆಸ್ತಿಗಳಲ್ಲಿ ಯಾವುದೇ ವಿವಾದ ಉಂಟಾಗಬಾರದೆಂದು ದಿಃ 03-04-2009 ರಂದು ಲಾ ಸು ನಾಗರಾಜು ಪತ್ರ ಬರಹಗಾರರು ಹಾಗೂ ಸಬ್ಬತ್ತಿ ಗ್ರಾಮದ ಕಾಳಪ್ಪನ ಮಗ ಮಂಜೇಗೌಡ, ಬಾಣದ ಹಳ್ಳಿ ಗ್ರಾಮದ ತಿಮ್ಮೇಗೌಡರ ಮಗ ಬಿ ಟಿ ಕೃಷ್ಣ ರವರ ಸಮ್ಮುಖದಲ್ಲಿ ನನ್ನ ತಂದೆ ಹೇಳಿದ ರೀತ್ಯಾ ಗಣಕೀಕರಣಗೊಳಿಸಿ ಒಂದು ನೊಂದಾಯಿತ ಮರಣ ಶಾಸನ ಪತ್ರವನ್ನು ನನ್ನ ಹೆಸರಿಗೆ, 2 ನೇ ಪ್ರತಿವಾದಿ ಮತ್ತು 3 ನೇ ಪ್ರತಿವಾದಿಯ ಹೆಸರಿಗೆ ಬರೆಸಿ ಇಟ್ಟಿದ್ದಾರೆ ಎಂದರೆ ಸರಿಯಲ್ಲ.

ಮರಣ ಶಾಸನ ಪತ್ರದಲ್ಲಿ ನಮೂದಿಸಿದ ಹಾಗೆ ನಾನು , 2 ಮತ್ತು 3 ನೇ ಪ್ರತಿವಾದಿಯರು ಭಾಗವನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿಯಲ್ಲ . ಮರಣ ಶಾಸನ ಪತ್ರದಲ್ಲಿ ನಮೂದಿಸಿರುವ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳಾದ್ದರಿಂದ ಮರಣ ಶಾಸನ ಪತ್ರವನ್ನು ಬರೆಯಲು ನನ್ನ ತಂದೆಗೆ ಅಧಿಕಾರ ಇದ್ದು, ಮರಣ ಶಾಸನ ಪತ್ರದಲ್ಲಿ ಹೇಳಿರುವ ಹಾಗೆ ಹಿಸ್ಸೆಯನ್ನು ಪಡೆಯಬೇಕಾಗುತ್ತದೆ ಎಂದರೆ ಸರಿಯಲ್ಲ . ದಾವಾ ಆಸ್ತಿಗಳು ಮತ್ತು ಮರಣ ಶಾಸನ ಪತ್ರದಲ್ಲಿ ನಮೂದಿಸಿರುವ ಆಸ್ತಿಗಳನ್ನು ನನ್ನ ತಂದೆ ಕ್ರಯಕ್ಕೆ ಪಡೆಯುವಾಗ ನಾನು ಅಪ್ರಾಪ್ತ ವಯಸ್ಕಳಾಗಿದ್ದು ದುಡಿಯುವ ಸಾಮರ್ಥ್ಯ ಇರಲಿಲ್ಲ ಆದ್ದರಿಂದ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ದಾವಾ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವಾಗ ನನಗೆ 16 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ಮರಣ ಶಾಸನ ಪತ್ರದ ಪ್ರಕಾರ ನನಗೆ, 2 ಮತ್ತು 3 ನೇ ಪ್ರತಿವಾದಿಯರಿಗೆ ಸಮಾನಾದ ಹಕ್ಕಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ರಘು ಎಂ.)
2ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಅರಕಲಗೂಡು